

ಈ ಫ್ರೆಂಚ್ ಕಲಾವಿದರ ಕೈಗೆ ಸೆರಾಮಿಕ್ ಸಿಕ್ಕಿಹಾಕಿಕೊಂಡರೆ ಮುಗಿಯಿತು. ಎಲ್ಲಾ ಕಾಂಡೋಮ್‌ಗಳ ರೂಪ ತಾಳಿ ನಾಚಿ ನಿಂತುಬಿಡುತ್ತವೆ. ಎಷ್ಟೆಂದರೂ ಫ್ರಾನ್ಸ್‌ನ ಆ ಕಲಾವಿದನ ಊರಿನ ಹೆಸರೇ ಕಾಂಡೋಮ್ ಅಲ್ಲವೇ?

ಜಪಾನಿನಲ್ಲಿ ಇತ್ತೀಚೆಗೆ ಸಲಿಂಗಿಗಳ ಪರೇಡ್ ನಡೆಯಿತು. ಛಾಯಾ ಚಿತ್ರಗ್ರಾಹಕರಿಗೆ ಸುಗ್ಗಿ. ಕ್ಯಾಮೆರಾವೂ ನಾಚಿ ಸುಮ್ಮನಾಯಿತೋ ಏನೋ? ಆದರೆ ಮೊಬೈಲುಗಳನ್ನು ಕೈಯಲ್ಲಿ, ಜೇಬಿನಲ್ಲಿ, ಕತ್ತಿಗೆ ಜೋಲಿಸಿಕೊಂಡು ನಡೆಯುತ್ತಿದ್ದ ಜನ ಆ ಪುಟ್ಟ ಸಾಧನವನ್ನು ಬೇರೆ ಕಡೆಯೂ ಇಟ್ಟುಕೊಳ್ಳಬಹುದು ಎಂಬುದನ್ನು ಈ ಚಿತ್ರವನ್ನು ನೋಡಿಯೇ ಕಲಿತರಂತೆ.



ರೈಲಲ್ಲಿ ಆರಾಮಾಗಿ ಸೀಟು ಸಿಕ್ಕರೆ ಕೈಯಲ್ಲಿರುವ ಪುಸ್ತಕದ ಮೇಲೆ ಕಣ್ಣು ಹಾಯಿಸಬಹುದು. ಆದರೆ ಆ ಪುಸ್ತಕ ಕಾಮಸೂತ್ರವಾಗಿದ್ದರೆ... ನಿಂತವರೆಲ್ಲ ನಿಮ್ಮ ಕಡೆ ಕಣ್ಣು ಹಾಯಿಸಬಹುದು. ಅದಕ್ಕೇ ಬ್ರಿಟನ್ನಿನ ಕಂಪೆನಿ ಆಡಿಯೋ ಸಿಡಿ ತಂದಿದೆ. ಎಂಪಿ3ಗೆ ಡೌನ್‌ಲೋಡ್ ಮಾಡಿಕೊಂಡು ಮುಜುಗರ ತಪ್ಪಿಸಿಕೊಳ್ಳಬಹುದು.



ಅವಕಾಶ ಸಿಕ್ಕಾಗಲೆಲ್ಲಾ ಜೇನ್ನೊಣಗಳನ್ನು ಗಡ್ಡಕ್ಕೆ ಮುತ್ತಿಸಿಕೊಂಡು ಲಲನೆಯರಿಂದ ಮುತ್ತಿಕ್ಕಿಸಿಕೊಳ್ಳುವ ಹೈದರಿಗಾಗಿ ಕೆನಡಾ ಸ್ಪರ್ಧೆಯನ್ನೇ ನಡೆಸುತ್ತಿದೆ. ಆದರೇನು, ಗಡ್ಡಕ್ಕೆ ಮುತ್ತಿನ ಕಚುಗುಳಿ ಸಿಗುವ ಬದಲು ಜೇನ್ನೊಣಗಳಿಗೆ ಲಿಪ್‌ಸ್ಟಿಕ್ ತುಟಿಯಿಂದ ಮುಜುಗರವಾಗುತ್ತಿರಬಹುದು.

'ಡೋಂಟ್ ಡ್ರಿಂಕ್ ಆ್ಯಂಡ್ ಡ್ರೈವ್' ಚಾಲಕನಿಗೆ ಅನ್ವಯಿಸಬಹುದು. ಕಾರೇಕೆ ಕೇರ್ ಮಾಡಬೇಕು? ಈಗ ಲಂಡನ್ನಿನಲ್ಲಿ ವಿಸ್ಕಿ ಡಿಸ್ಟಿಲ್ ಮಾಡಿದ ನಂತರ ಉಳಿಯುವ ತ್ಯಾಜ್ಯವನ್ನು ಕಾರಿನ ಎಂಜಿನ್‌ಗೆ ಕುಡಿಸಿ ಓಡಿಸಲಿದ್ದಾರೆ ವಿಜ್ಞಾನಿಗಳು. ಕಾರಿಗೆ ಇನ್ನು ಮುಂದೆ ಓಲಾಡಲು ಕುಡುಕನ ಕರಾಮತ್ತಿನ ಅಗತ್ಯವಿಲ್ಲ.



ವೃತ್ತಿ ಏನೇ ಇರಲಿ, ನಿವೃತ್ತಿಯಾದ ನಂತರ ಪಿಂಚಣಿ ಕಾಂಚಾಣ ಕೈಯಲ್ಲಾಡಬೇಕು. ಮುಂಬೈನ ದೇವದಾಸಿಯರೂ ಈಗ ಪಿಂಚಣಿ ಬೇಡಿಕೆ ಮುಂದಿಟ್ಟಿದ್ದಾರೆ. ನಿವೃತ್ತಿಯಾಗಿದ್ದು ಗ್ಯಾರಂಟಿ ಎಂಬುದನ್ನು ಅವರು ಖಾತ್ರಿಪಡಿಸಿದ ರೀತಿಯಿಂದ ಸರ್ಕಾರಿ ಅಧಿಕಾರಿಗಳು ಕೈಯಲ್ಲಿ ಬಟ್ಟೆ ಹಿಡಿದು ಓಡಾಡುತ್ತಿದ್ದಾರಂತೆ.

ಪ್ಯಾರಿಸ್‌ನ ಈ ಪ್ರಮದೆಯರು ಭಾರಿ ಹುಷಾರು. ಎಟಿಎಂ ಬಳಿ ನಿಂತರು. ಗ್ರಾಹಕ ಮಷಿನ್ ಒಳಗೆ ಕಾರ್ಡ್ ತೂರಿಸಿ ನೋಟಿನ ಪುಡಿಕೆ ಹೊರ ಬೀಳುವಾಗ ಇವರ ಉಡುಪು ಮಾಯವಾಗಿ ನೋಟಿನ ಬದಲು ಇನ್ನೇನೋ ಗ್ರಾಹಕನ ಕಣ್ಣಿಗೆ ಬಿತ್ತು. ಅಷ್ಟರಲ್ಲಿ ನೋಟಿನ ಪುಡಿಕೆಯೂ ಮಾಯ. ಈಗ ಈ ಮಾಯಾಂಗನೆಯರು ಜೈಲು ಕಂಬಿ ಎಣಿಸುತ್ತಿದ್ದಾರೆ. ಇಡೀ ಎಟಿಎಂ ಅನ್ನೇ ದರೋಡೆ ಮಾಡುವವರಿಗೆ ಇದು ಯಾಕೆ ಹೊಳೆದಿರಲಿಲ್ಲವೋ?

ಬೆಂಗಳೂರಿನ ಬ್ಯುಸಿ ಬ್ರಿಗೇಡ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಓಡಾಡುವಾಗ ಎದುರಿಗೆ ರಂಗಿನ ಬಟ್ಟೆ ಕಂಡರೆ ಕಣ್ಣಿದ್ದವರೂ ಕುರುಡರಾಗಿ ಢಿಕ್ಕಿ ಹೊಡೆಯುತ್ತಾರೆ. ಆದರೆ ಜರ್ಮನಿಯ ಈ ಅಂಧ ಅಥ್ಲೀಟ್ ಮರೆನಾ 60 ಅಡಿ ಎತ್ತರದ ಕಟ್ಟಡವನ್ನು ಹೇಗೆ ಸರ್ರನೆ ಇಳಿಯುತ್ತಿದ್ದಾರೆ ನೋಡಿ. ನಮ್ಮವರಿಗೆ ಅವರಿಂದ ತರಬೇತಿ ಕೊಡಿಸಬಹುದಿತ್ತು.

